**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

# ಕರ್ನಾಟಕ ಸ್ಟ್ಯಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–34)**

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ನಾಲ್ಕನೇ ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 9ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 9ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ತರುವಾಯ ಕೊನೆಯ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು,-

"ಅಲ್ಲದೇ ಪರಂತು, ಪಿಎಂ ಎಸ್‌ವಿಎ ನಿಧಿಯ (ಪಿಎಂ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ) ಸ್ಕೀಮಿನ ಅಡಿಯಲ್ಲಿ ಬೀದಿಬದಿ ವ್ಯಾಪಾರಿಗಳು ಬರೆದುಕೊಟ್ಟ ಸಾಲ ಕರಾರುಗಳ ಮೇಲೆ ಸಂದಾಯ ಮಾಡಬಹುದಾದ ಸ್ಟ್ಯಾಂಪು ಸುಂಕವನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ರಾಜ್ಯ ಸರ್ಕಾರವು ಮಾಫಿ ಮಾಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಧಾನ ಮಂತ್ರಿ ಎಸ್‌ವಿಎ ನಿಧಿಯ (ಪಿಎಂ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ) ಸ್ಕೀಮಿನ ಅಡಿಯಲ್ಲಿ ಬೀದಿಬದಿ ವ್ಯಾಪಾರಿಗಳು ಬರೆದುಕೊಟ್ಟ ಸಾಲ ಕರಾರುಗಳ ಮೇಲೆ ಸಂದಾಯ ಮಾಡಬಹುದಾದ ಸ್ಟಾಂಪು ಸುಂಕವನ್ನು ಮಾಫಿ ಮಾಡಲು 2022-23ರ ರಾಜ್ಯ ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವವನ್ನು ಜಾರಿಗೊಳಿಸುವುದಕ್ಕಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್. ಅಶೋಕ**
ಕಂದಾಯ ಸಚಿವರು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ**
**(1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ**

**Xxx xxx xxx**

**9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ.-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,-

(ಎ) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಕರ್ನಾಟಕ ರಾಜ್ಯದಾದ್ಯಂತ ಅಥವಾ ಅದರ ಯಾವುದೇ ಭಾಗದಲ್ಲಿ ಶೇಕಡಾ ಐವತ್ತರವರೆಗೆ ಇಳಿತಾಯ ಮಾಡಿದ ಲಿಖಿತಗಳ ಅಥವಾ ಅಂಥ ವರ್ಗಕ್ಕೆ ಸೇರಿದ ಯಾವುದೇ ಲಿಖಿತ ಅಥವಾ ವ್ಯಕ್ತಿಗಳ ಯಾವುದೇ ವಿಶಿಷ್ಟ ವರ್ಗದಿಂದ ಅಥವಾ ಅದರ ಪರವಾಗಿ ಅಥವಾ ಅಂಥ ವರ್ಗದ ಯಾರೇ ಸದಸ್ಯರಿಂದ ಅಥವಾ ಅವರ ಪರವಾಗಿ ಬರೆದುಕೊಟ್ಟಾಗ ಯಾವುದೇ ಲಿಖಿತಗಳಿಗೆ ವಿಧಿಸಬಹುದಾದಂಥ ಸುಂಕಗಳನ್ನು ಉತ್ತರಾನ್ವಯವಾಗಿಯೇ ಆಗಲಿ ಅಥವಾ ಪೂರ್ವಾನ್ವಯವಾಗಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು; ಮತ್ತು

**Xxx xxx xxx**

ಅಲ್ಲದೇ, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ, ಅಧಿಸೂಚನೆಯ ಮೂಲಕ, ದಿನಾಂಕ : 04.11.2019 ರಿಂದ ಐದು ವರ್ಷಗಳ ನೀತಿಯ ಅವಧಿಯಲ್ಲಿ ಅಥವಾ ಹೊಸ ನೀತಿಯನ್ನು ಘೋಷಿಸುವವರೆಗೆ, ಸರ್ಕಾರಿ ಆದೇಶ ಸಂಖ್ಯೆ: ಸಿಐ 115 ಜಕಾಇ 2017, ದಿನಾಂಕ 04.11.2019 ರಲ್ಲಿ ನಿರ್ದಿಷ್ಟಪಡಿಸಿದ ಅಥವಾ ನಿಯಮಿಸಲಾದ ಪ್ರಾಧಿಕಾರದಿಂದ ಆ ಮಟ್ಟಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಕರ್ನಾಟಕ ನೂತನ ಜವಳಿ ಮತ್ತು ಸಿದ್ಧಉಡುಪು ನೀತಿ 2019-24ರ ಸಂಬಂಧದಲ್ಲಿ ಅರ್ಹ ಉದ್ದಿಮೆಗಳು ಅಥವಾ ಅವರ ಪರವಾಗಿ ಬರೆದುಕೊಟ್ಟ ಯಾವುದೇ ಲಿಖಿತದ ಮೇಲೆ ಸಂದಾಯವಾಗುವ ಸ್ಟ್ಯಾಂಪು ಶುಲ್ಕವನ್ನು ಮಾಫಿ ಮಾಡಬಹುದು.

**Xxx xxx xxx**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಕಾಸಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 500, 20ನೇ ಡಿಸೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**FOURTEENTH SESSION**

# THE KARNATAKA STAMP (FOURTH AMENDMENT) BILL, 2022

**(LA Bill No. 34 of 2022)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the Seventy third year of the Republic of India as follows:-

**1. Short title and commencement.–** (1) This Act may be called the Karnataka Stamp (Fourth Amendment) Act, 2022.

(2) It shall come into force at once.

**2. Amendment of section 9.-**In the Karnataka Stamp Act, 1957, (Karnataka Act 34 of 1957), in section 9, in sub-section (1), in clause (a), after the last proviso, the following shall be inserted, namely:-

"Provided also that, the State Government may, in public interest, remit the Stamp duty payable on loan agreements executed by the Street Vendors under the scheme of PM SVANidhi (PM Street Vendor's Atmanirbhar Nidhi)."

## STATEMENT OF OBJECTS AND REASONS

It is considered necessary to amend the Karnataka Stamp Act, 1957 (Karnataka Act 34 of 1957) to give effect the proposal made in the State Budget Speech 2022-23 to remit the Stamp Duty on loan agreements executed by the Street Vendors under the scheme of PM SVANidhi (PM Street Vendor's Atmanirbhar Nidhi).

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**R. ASHOKA**
Minister for Revenue

**M.K. VISHALAKSHI**
Secretary
Karnataka Legislative Assembly

## ANNEXURE
## EXTRACT FROM THE KARNATAKA STAMP ACT, 1957
## (Karnataka Act 34 of 1957)

**XXX XXX XXX**

**9. Power to reduce, remit or compound duties.-** (1) The State Government may, by rule or order published in the Official Gazette,-

(a) reduce upto fifty percent in the whole or any part of the State of Karnataka, if in the opinion of the State Government it is necessary in public interest so to do, the duties with which any particular class of instruments, or any of the instruments belonging to such class, or any instruments when executed by or in favour of any particular class of persons, or by or in favour of any members of such class, are chargeable; and

**XXX XXX XXX**

"Provided also that the State Government may, in public interest, by notification, remit, during the policy period of five years from the date of 04-11-2019 or till a new policy is announced, stamp duty payable on the instruments to be specified therein, executed by or in favour of the eligible enterprises, in connection with the Karnataka New Textile and Garment Policy, 2019-24, specified in the Government Order No. CI 115 JAKAIEE 2017, dated: 04.11.2019 or specified by the State Government from time to time subject to production of certificate to that effect from the Prescribed Authority."

**XXX XXX XXX**

Govt. Press, Suvarna Vikasa Soudha, Belgavi, 20th Dec, 2022, P7, W.D. , Copies 500